

# ನರಿಯ ಸಂಧಾನ

■ ವೇದಾವತಿ ಹೆಚ್.ಎಸ್.

ಕಲೆ: ಸಂತೋಷ್ ಸಸಿಹಿತ್ಲು

ಅದೊಂದು ದಿನ ರಾಮು ತನ್ನ ಮನೆಯ ಹಟ್ಟಿಯಲ್ಲಿದ್ದ ಹಸುಗಳನ್ನು ಮೇಯಿಸಲು ಕಾಡಿಗೆ ಹೊಡೆದುಕೊಂಡು ಹೋದನು. ಹಸುಗಳು ಹುಲ್ಲು ಮೇಯುತ್ತಿದ್ದಾಗ ರಾಮು ಒಂದು ಮರದ ಕೆಳಗೆ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದನು. ಹೀಗಿರುವಾಗ ಕಾಡಿನಲ್ಲಿದ್ದ ದೊಡ್ಡದಾದ ಹುಲಿಯೊಂದು ಹಸುಗಳನ್ನು ತಿನ್ನಲು ಅಲ್ಲಿಗೆ ಬಂದಿತು. ಹುಲಿಯನ್ನು ನೋಡಿ ಹಸುಗಳು ದಿಕ್ಕಾಪಾಲಾಗಿ ಓಡಿದವು.

ಹುಲಿ ತನ್ನ ಪಕ್ಕದಲ್ಲಿಯೇ ನಿಂತಿರುವುದನ್ನು ಕಂಡು ರಾಮು ಭಯದಿಂದ ತನ್ನ ಕೈಯಲ್ಲಿದ್ದ ಕೋಲನ್ನು ಹಿಡಿದು ಅಲ್ಲಾಡದೇ ನಿಂತುಕೊಂಡನು. ಹುಲಿ ಕೂಡ ರಾಮುನ ಕೈಯಲ್ಲಿರುವುದು ಬಂದೂಕು ಎಂದುಕೊಂಡು ಪ್ರಾಣ ಭಯದಿಂದ ಅಲ್ಲಾಡದೇ ಅಲ್ಲೇ ನಿಂತುಕೊಂಡಿತು. ಹೀಗೆ ಇಬ್ಬರೂ ಪ್ರತಿಮೆಗಳಂತೆ ಒಬ್ಬರನ್ನೊಬ್ಬರು ನೋಡುತ್ತಾ ನಿಂತು ಬಿಟ್ಟರು.

ಅದೇ ದಾರಿಯಲ್ಲಿ ನರಿಯೊಂದು ನಡೆದುಕೊಂಡು ಹೋಗುತ್ತಿರುವಾಗ ಇವರಿಬ್ಬರನ್ನು ನೋಡಿತು. ಹೇಳಿ ಕೇಳಿ ನರಿ ಬುದ್ಧಿವಂತ ಪ್ರಾಣಿಯೆಂದು ಕಾಡಿನಲ್ಲಿ ಹೆಸರು ಪಡೆದಿತ್ತು. ಅದು ಇಂತಹ ಸಂದರ್ಭಕ್ಕಾಗಿಯೇ ಕಾದಿತ್ತು. ನರಿ ಹುಲಿಯ ಬಳಿಗೆ ಬಂದು 'ಅಯ್ಯೋ ಹುಲಿಯಣ್ಣ, ನಿನ್ನ ಹೆಸರನ್ನು ಕೇಳಿದರೆ ಇಡೀ ಕಾಡಿನ ಪ್ರಾಣಿಗಳು ಮಾತ್ರವಲ್ಲ ಮನುಷ್ಯರು ಕೂಡ ಭಯಪಡುತ್ತಾರೆ. ಆದರೆ ನೀನೇಕೆ ಮನುಷ್ಯನಿಗೆ ಹೆದರಿಕೊಂಡು ನಿಂತಿರುವೆ? ನೀನು ಕಾಡಿನ ರಾಜನೆಂದು ಹೆಸರುವಾಸಿಯಾಗಿರುವೆ. ಅಲ್ಲದೆ, ಮನುಷ್ಯನಿಗಿಂತಲೂ ಬಲಿಷ್ಠನಾಗಿರುವೆ. ಒಂದೇ ಬಾರಿಗೆ ಅವನ ಮೇಲೆ ಎರಗಿ ತಿಂದುಬಿಡು. ನಿನಗೂ ಒಳ್ಳೆಯ ಊಟ ಸಿಕ್ಕಂತೆ ಆಗುತ್ತದೆ' ಎಂದಿತು.

ನರಿಯ ಮಾತನ್ನು ಕೇಳಿ ಹುಲಿ, 'ನೀನೇ ಬುದ್ಧಿವಂತನೆಂದು ಬೀಗಬೇಡ. ಆ ಮನುಷ್ಯನ ಕೈಯಲ್ಲಿ ದೊಡ್ಡದಾದ ಬಂದೂಕು ಇರುವುದನ್ನು ಮೊದಲು ನೋಡು. ಎಲ್ಲಿಯಾದರೂ ಒಂದು ಹೆಜ್ಜೆ ಮುಂದಕ್ಕೆ ಇಟ್ಟರೂ ಅವನಲ್ಲಿರುವ ಬಂದೂಕಿನಿಂದ ಒಂದೇ ಬಾರಿಗೆ ನನ್ನನ್ನು ಹೊಡೆದು ಸಾಯಿಸಿ ಬಿಡುತ್ತಾನೆ' ಎಂದಿತು.

ಆಗ ನರಿ ಮನಸ್ಸಿನಲ್ಲಿ 'ಇವರಿಬ್ಬರ ಜಗಳದಲ್ಲಿ ಮೂರನೆಯವನಾದ ನಾನು ಲಾಭ ಪಡೆಯಬೇಕು' ಎಂದುಕೊಳ್ಳುತ್ತಾ 'ಹುಲಿಯಣ್ಣ, ನೀನು ಭಯಪಡಬೇಡ. ಆ ಮನುಷ್ಯ ನಿನಗೆ ಬಂದೂಕಿನಿಂದ ಗುಂಡು ಹೊಡೆಯದಂತೆ ಬುದ್ಧಿಮಾತನ್ನು ಹೇಳುತ್ತೇನೆ. ಇಷ್ಟೆಲ್ಲಾ ಶ್ರಮಪಟ್ಟು ನಿನ್ನನ್ನು ಮನುಷ್ಯನಿಂದ ಬದುಕಿಸುತ್ತಿರುವುದರಿಂದ ನನಗೇನು ಕಾಣಿಕೆ ನೀಡುತ್ತೀಯಾ?' ಎಂದು ಕೇಳಿತು.

ಆ ಗಳಿಗೆಯಲ್ಲಿ ಹುಲಿಗೆ ಜೀವ ಉಳಿಸಿಕೊಂಡರೆ ಸಾಕು ಎನ್ನುವಂತಾಗಿತ್ತು. 'ನರಿಯಣ್ಣ, ನೀನು ಮನುಷ್ಯನ ಕೈಯಲ್ಲಿರುವ ಬಂದೂಕನ್ನು ಕಸಿದುಕೊಂಡರೆ ನಾನು ಇಲ್ಲಿಂದ ಓಡಿ ಹೋಗುತ್ತೇನೆ. ಅಷ್ಟು ಮಾಡಿ ಪುಣ್ಯ ಕಟ್ಟಿಕೋ' ಎಂದಿತು ಹುಲಿ. ನರಿ ಈಗ ರಾಮುನ ಬಳಿಗೆ ಬಂದಿತು. 'ನೀನೇಕೆ ಅಲ್ಲಾಡದೇ ನಿಂತಿರುವೆ?. ಹುಲಿರಾಯ ನಿನ್ನನ್ನು ಕೊಂದು ತಿನ್ನಬೇಕೆಂದು ನಿಶ್ಚಯಿಸಿದ್ದಾನೆ. ನಿನ್ನ ಅಮೂಲ್ಯವಾದ ಜೀವವನ್ನು ಹುಲಿರಾಯನಿಂದ ಉಳಿಸಬೇಕೆಂದು ನಾನೀಗ ಇಲ್ಲಿಗೆ ಬಂದಿದ್ದೇನೆ. ಅದಕ್ಕಾಗಿ ನನಗೇನು ಕಾಣಿಕೆಯನ್ನು ನೀಡುವೆ?' ಎಂದು ಕೇಳಿತು.

ನರಿಯ ಮಾತನ್ನು ಕೇಳಿ ರಾಮುಗೆ 'ಬದುಕಿದೆಯಾ ಬಡ ಜೀವವೇ' ಎನ್ನುವಷ್ಟು ಆನಂದವಾಯಿತು. 'ನರಿಯಣ್ಣ, ನಿನ್ನ ಉಪಕಾರವನ್ನು ಜೀವನದಲ್ಲಿ ನಾನೆಂದೂ ಮರೆಯಲಾರೆ, ದಯವಿಟ್ಟು ಹುಲಿಯಿಂದ ನನ್ನನ್ನು ರಕ್ಷಿಸು. ನೀನು ಏನು ಕೇಳಿದರೂ ಕೊಡಲು ಸಿದ್ಧನಿದ್ದೇನೆ' ಎಂದು ಅಂಗಲಾಚಿದನು.

ನರಿ ಈಗ ಹುಲಿಯ ಬಳಿಗೆ ಬಂದು 'ಹುಲಿಯಣ್ಣ, ನಾನು ಮನುಷ್ಯನ ಬಳಿಗೆ ಹೋಗಿ ನಿನಗೆ ಗುಂಡನ್ನು